ಆ) ಹಾಗಿದ್ದಲ್ಲಿ ಸದರಿ ಸಮಿತಿಯ ವರದಿಯನ್ನು ಯಾವ ದಿನಾಂಕದಂದು ಸಲ್ಲಿಸಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಆ) ಹೌದು. ವಿಧಾನ ಪರಿಷತ್ತು ಸದನದ ಸಮಿತಿಯೊಂದನ್ನು ರಚಿಸಿದೆ.

ಆ) ಸಮಿತಿಯು ಈಗಾಗಲೇ ಒಂದು ಭಾರಿ ಸಭೆ ಸೇರಿ ಕೆಲವೊಂದಂ ಮಾಹಿತಿಯನ್ನು ಆಡಳಿತ ಇಲಾಖೆಯಿಂದ ಕೇಳಿದೆ. ಸದರಿ ಮಾಹಿತಿಯನ್ನು ಸಲ್ಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಉಪಾಧ್ಯಕ್ಷಣಿಯವರೆ, ನನ್ನ ಪ್ರಶ್ನೆಗೆ ಉತ್ತರ ಬಂದಿದೆ. ಸದನದ ಸಮಿತಿಯನ್ನು ನೇಮಿಸಿದ್ದು ಯಾವಾಗ? ಆ ಸಮಿತಿ ಯಾವಾಗ ರಿಪೋರ್ಟ್ ಕೊಡುತ್ತದೆ? ನಡೆದಿರುವ ಅವ್ಯವಹಾರದ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮೇಲ್ಮನೆಯ ಸದಸ್ಯರಿರುವ ಸದನದ ಸಮಿತಿಯನ್ನು ರಚಿಸಿದ್ದಾರೆ. ಆ ಸಮಿತಿಯವರು ಈಗಾಗಲೇ ಸಭೆ ಸೇರಿ ಆಸ್ಪತ್ರೆಗಳಿಗೆ ಭೇಟಿ ಕೊಟ್ಟಿದ್ದಾರೆ. ಈಗಲೇ ತಮ್ಮ ವರದಿ ಕೊಡಿಯೆಂದು ಅವರಿಗೆ ಕೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಅದು ಸದನದ ಸಮಿತಿ.

ಶ್ರೀ ರಾಮಲಿಂಗರೆಡ್ಡಿ.—೮೭ ಲಕ್ಷ ರೂಪಾಯಿ ಖರ್ಚುಮಾಡಿ ಈ ಎಕ್ವಿಪ್‌ಮೆಂಟ್ಸ್ ತರಿಸಿದ ಮೇಲೆ ಅವುಗಳನ್ನು ಯಾವುದೇ ರೀತಿಯಲ್ಲಿ ಉಪಯೋಗಿಸುತ್ತಿಲ್ಲ. ಅವುಗಳನ್ನು ಆಸ್ಪತ್ರೆಗಳಿಗೆ ನೀಡಿಲ್ಲ. ಆದಷ್ಟು ಬೇಗ ಈ ಎಕ್ವಿಪ್‌ಮೆಂಟ್ಸನ್ನು ಆಸ್ಪತ್ರೆಗಳಿಗೆ ತಲುಪಿಸಬೇಕು, ಅವುಗಳನ್ನು ಇಡಲು ಏರ್‌ಕಂಡೀಶನ್ ವ್ಯವಸ್ಥೆ ಬೇಕು, ತಜ್ಞರು ಬೇಕು. ಈ ಕೆಲಸವೆಲ್ಲಾ ಆಗುತ್ತಿಲ್ಲ. ಇದು ಆದಷ್ಟು ಬೇಗ ಆಗಬೇಕು ಮತ್ತು ಜನತೆಗೆ ಇದರ ಉಪಯೋಗ ಆಗಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಆರೋಗ್ಯ ಸಚಿವೆಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸದಸ್ಯರು 'ಯಾವುದಾದರೂ ಸಮಿತಿಯನ್ನು ರಚಿಸಿರುವುದು ಹೌದೆ?' ಎಂದು ಕೇಳಿರುವ ಪ್ರಶ್ನೆಗೆ ಸಮಿತಿಯು ಕಾರ್ಯನಿರತವಾಗಿದೆ ಎಂದು ಉತ್ತರ ಕೊಟ್ಟಿದ್ದೇನೆ. ಸದರಿ ಸಮಿತಿ ವರದಿ ಸಲ್ಲಿಸಿದ ಕೂಡಲೇ ಯಾವ ದಾಕ್ಷಿಣ್ಯವೂ ಇಲ್ಲದೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆ.

ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ

೩೧. **ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) —**ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಆ) ಮಾಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರವು ಜಿಲ್ಲಾ ಪರಿಷತ್ ಮೂಲಕ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು) —

ಅ) ಬಂದಿದೆ.

ಆ) ಸಮಸ್ಯೆಯ ಪರಿಹಾರಕ್ಕಾಗಿ ಈಗಿರುವ ವ್ಯವಸ್ಥೆಗೆ ಪೂರಕವಾಗಿ ೧೯೯೦–೯೧ನೇ ಸಾಲಿನಲ್ಲಿ ೪ ನಳದ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಇದೇ ರೀತಿ ೧೯೯೦–೯೧ನೇ ಕ್ರಿಯಾ ಯೋಜನೆಯಡಿಯಲ್ಲಿ ಹೆಚ್ಚಿಗೆ ಕೆಲವು ಕಿರು ನೀರು ಸರಬರಾಜು ಯೋಜನೆಗಳನ್ನು ಹಾಗೂ ಕೊಳವೆ ಬಾವಿಗಳನ್ನು ಕೊರೆದು ಕೈ ಪಂಪು ಜೋಡಿಸುವ ಪ್ರಸ್ತಾಪವಿದೆ.

ಕುಡಿಯುವ ನೀರಿನ ಅಭಾವ ತೀವ್ರತೆ ಕಂಡು ಬಂದಲ್ಲೆಲ್ಲಾ ಸಾಕಷ್ಟು ನೀರನ್ನು ಒದಗಿಸಲು ಹೆಚ್ಚಿನ ಕೊಳವೆ ಬಾವಿಗಳನ್ನು ತೆಗೆದಾಗಲಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ನೀರನ್ನು ಬೇರೆ ಕಡೆಯಿಂದ ಸಾಗಿಸತಕ್ಕ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಮಸ್ಯೆ ಪರಿಹಾರಕ್ಕಾಗಿ ಈಗಿರುವ ವ್ಯವಸ್ಥೆಗೆ ಪೂರಕವಾಗಿ ೧೯೯೦-೯೧ನೇ ಸಾಲಿನಲ್ಲಿ ಹೆಚ್ಚಿನ ವ್ಯವಸ್ಥೆ ಕೈಗೊಳ್ಳಲಾಗಿದೆ. ಎಂದು ನಾನು ಈಗಾಗಲೇ ಕಳೆದ ಅಧಿವೇಶನದಲ್ಲಿ ನನ್ನ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಿಗೆ ಅವ್ಯ ಪ್ರಾಬ್ಲಮೇಟಿಕ್ ವಿಲೇಜಸ್ ಇದ್ದು, ಸರ್ಕಾರದ ನಾರ್ಮ್ಸ್ ಒಳಗೆ ಅವು ಬರುವುದಿಲ್ಲ ಎಂದು ಹೇಳಿದ್ದಕ್ಕೆ ೫-೬ ಬೋರ್‌ವೆಲ್‌ಗಳನ್ನು ಅಲ್ಲಿ ಹಾಕಿದರೂ, ಆದರೆ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿ ಇಲ್ಲ. ಆಗ ಸಂಬಂಧಪಟ್ಟ ಗ್ರಾಮಾಭಿವೃದ್ಧಿ ಮಂತ್ರಿಗಳಾಗಿದ್ದ - ಶ್ರೀ ಬಸವಲಿಂಗಪ್ಪನವರು ಮಂಡ್ಯದಲ್ಲಿ ಸಭೆ ನಡೆಸಿದಾಗ ಅವರ ಗಮನಕ್ಕೆ ಇದನ್ನು ತಂದಿದ್ದೇನೆ ಮತ್ತು ಎಲ್ಲ ಪಂಚಾಯತ್‌ಗಳಿಗೂ ಪತ್ರ ಬರೆದಿದ್ದೇನೆ. ಈಗ ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಿಲ್ಲದೆ ಮೂರು ಕಿಲೋಮೀಟರ್ ದೂರದಿಂದ ಹೆಣ್ಣು ಮಕ್ಕಳು ನೀರನ್ನು ಹೆತ್ತಕೊಂಡು ಬರುವಂತಹ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಈಗ ಕೇವಲ ೧೦ ಹಳ್ಳಿಗಳಲ್ಲಿ ಸರ್ಕಾರ ಬೋರ್‌ವೆಲ್ ಹಾಕಿಸಿದೆ. ನಾನು ಕೇಳಿದಾಗಲೆಲ್ಲಾ ಹಾಕಿಸಿದ್ದಾರೆ. ಆದರೆ ನೀರು ಬರುತ್ತಿಲ್ಲ. ವಾಟರ್ ಸಪ್ಲೈ ಮಾಡಿ ಎಂದರೆ ಎಂಟುನೂರು ಜನಸಂಖ್ಯೆ ಇಲ್ಲ, ಸಾವಿರ ಜನಸಂಖ್ಯೆ ಇಲ್ಲ, ನಾರ್ಮ್ಸ್ ಇಲ್ಲವೆಂದು ರಿಜೆಕ್ಟ್ ಮಾಡುತ್ತಿದ್ದಾರೆ. ಐದಾರು ಸಲ ಸರ್ಕಾರಕ್ಕೆ ಬರೆದರೂ ಸಹ ರಿಜೆಕ್ಟ್ ಮಾಡುತ್ತಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಹೇಗೆ ಮಾಡಬೇಕೆನ್ನುವ ಕಷ್ಟ ಅಲ್ಲಿ ಬಂದಿದೆ. ಹೋದವಾರ ಜಿಲ್ಲಾಪರಿಷತ್ತಿನ ಪಿಡಬ್ಲ್ಯೂಡಿ, ಸೋಜಿನಿಯರಿಂಗ್ ವಿಭಾಗದಿಂದ ಕುಡಿಯುವ ನೀರನ್ನು ಟ್ರಾಕ್ಟರ್‌ನಲ್ಲಿ ಒದಗಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ತಮ್ಮದು ಏನು ಕ್ರಮ ಇದೆಯೆಂದು ಈ ಸದನದಲ್ಲಿ ತಿಳಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮತ್ತು ವಾರ್ತಾ ಸಚಿವರು) — ಸನ್ಮಾನ್ಯ ಅಧ್ಯಕ್ಷಿಣಿಯವರೆ, ಇದು ಬಹಳ ಮುಖ್ಯವಾದಂಥ ಪ್ರಶ್ನೆ, ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ನಾವು ಏನು ಮಾಡಬೇಕು. ನಮ್ಮ ಧೋರಣೆ ಏನಿದೆ ಎಂಬುದನ್ನು ಈ ಸಭೆಯ ಮುಂದಿಡಲಿಕ್ಕೆ ನನಗೆ ಒಂದು ಅವಕಾಶವನ್ನು ಕೊಟ್ಟಂತಾಗಿದೆ. ಅದಕ್ಕೆ ಮುಂಚೆ ನಾಗಮಂಗಲ ತಾಲ್ಲೂಕಿನಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ಹೇಳಬೇಕಾಗುತ್ತದೆ. ಅಲ್ಲಿ ಈಗಾಗಲೇ ೧೨ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ಗಳು, ೨೪ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳು ಜಾರಿಯಲ್ಲಿವೆ. ೧೦೮ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿವೆ ಅಲ್ಲಿಗೆ ೧೯೯೦-೯೧ರ ಕಾರ್ಯಕ್ರಮ ಈ ರೀತಿ ಇದೆ ಪೈಪ್ಡ್ ವಾಟರ್‌ಸ್ಕೀಮ್ಸ್‌ಗೆ ೪ ಇದ್ದು ಅದಕ್ಕೆ ಬೇಕಾದ ಹಣ ೮ ಲಕ್ಷ ರೂಪಾಯಿಗಳು. ಇದರಲ್ಲಿ ೨ ೮ ಲಕ್ಷ ರೂಪಾಯಿಗಳನ್ನು ಈಗ ಬಜೆಟ್‌ನಲ್ಲಿ ಈಗಾಗಲೇ ಸೇರಿಸಿದ್ದೇವೆ. ನಂತರ ಮಿನಿವಾಟರ್ ಸಪ್ಲೈ ಸ್ಕೀಮ್‌ಗೆ ಮಂಡ್ಯ ಜಿಲ್ಲೆಗೆ ೫೫ ಲಕ್ಷ ರೂಪಾಯಿಗಳನ್ನು ಈಗ ಕೊಟ್ಟಿದ್ದೇವೆ. ಅದರಲ್ಲಿ ನಾಗಮಂಗಲ ತಾಲೂಕಿಗೆ ೮ ಲಕ್ಷ ಬರುತ್ತದೆ. ಬೋರ್‌ವೆಲ್‌ಗೊಸ್ಕರ ಮಂಡ್ಯ ಜಿಲ್ಲೆಗೆ ೨೮ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ನಿಮ್ಮ ತಾಲ್ಲೂಕಿಗೆ ೩ ಲಕ್ಷ ರೂಪಾಯಿ ಬರುತ್ತದೆ. ನಾಗಮಂಗಲ ಟೌನ್ ಏನಿದೆ. ಇಲ್ಲಿ ೩೫ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿವೆ. ಅದರಲ್ಲಿ ೨೮ ಹ್ಯಾಂಡ್‌ಪಂಪ್‌ಗಳು ಮತ್ತು ೭ ಪವರ್ ಪಂಪುಗಳು ಇವೆ. ಇಂಪ್ರೂವ್‌ಮೆಂಟ್ ಸ್ಕೀಮ್‌ನಲ್ಲಿ ಕರ್ನಾಟಕ ಅರ್ಬನ್ ವಾಟರ್‌ಸಪ್ಲೈ ಬೋರ್ಡ್‌ನಿಂದ ೬ ಲಕ್ಷ ರೂಪಾಯಿಗಳ ಒಂದು ಸ್ಕೀಮ್‌ನ್ನು ಈಗ ತಯಾರು ಮಾಡುತ್ತಿದ್ದೇವೆ. ಇಷ್ಟು ಹೇಳಿದ ತಕ್ಷಣ ಎಲ್ಲಾ ಸರಿಹೋಯಿತು ಅಂತ ಅಲ್ಲ. ಈ ಪ್ರಶ್ನೆ ನಿಮ್ಮ ತಾಲ್ಲೂಕಿನಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿದೆ ಆದ್ದರಿಂದ ಇಡೀ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಇದ್ದ ಕಡೆ ನಾವು ಬಹಳಷ್ಟು ಗಮನಕೊಡಬೇಕಾಗುತ್ತದೆ.

ಈ ಪ್ರಾಬ್ಲಮ್ಸ್ ಇರುವ ವಿಲೇಜಸ್ ೧೯೮೧ರಲ್ಲಿ ನಮ್ಮ ರಾಜ್ಯದಲ್ಲಿ ೨೦ ಸಾವಿರ ಎಂದು ಲೆಕ್ಕ ಮಾಡಿದ್ದೇವೆ, ೧೯೮೫ರಲ್ಲಿ ೧೭ ಸಾವಿರ ಪ್ರಾಬ್ಲಮ್ ವಿಲೇಜಸ್ ಎಂದು ಲೆಕ್ಕ ಮಾಡಿದ್ದೇವೆ. ಈಗ ೫೯೪ ಮಾತ್ರ ಪ್ರಾಬ್ಲಮ್ ವಿಲೇಜಸ್ ಎಂದು ಹೇಳುತ್ತಿದ್ದೇವೆ ಇದರಲ್ಲಿ ೬೫೬ ಶೇತ್ ಕೆನರಾದಲ್ಲಿವೆ, ನಾನು ಗ್ರಾಮಾಂತರ ಪ್ರದೇಶದಿಂದ ಬರುತ್ತಿದ್ದೇನೆ. ಈ ೫೯೪ ಫಿಗರ್ ಏನಿದೆ ಇದು ನನಗೆ ಅರ್ಥವಾಗುತ್ತಾ ಇಲ್ಲ. ಇದಕ್ಕೂ ಜಾಸ್ತಿ ಕರ್ನಾಟಕದಲ್ಲಿ ಇಂತಹ ಪ್ರಾಬ್ಲಮ್ ವಿಲೇಜಸ್ ಇರಲೇಬೇಕು. ನನಗೆ ತಿಳಿದವಾಟ್ಟಿಗೆ ಈ ಪ್ರಾಬ್ಲಮ್ಸ್‌ನ್ನು ಎದುರಿಸುವುದಕ್ಕಾದಿ ಮೂರು ಮಾರ್ಗಗಳು ಇವೆ. ಎಲ್ಲೆಲ್ಲಿ ಬೋರ್‌ವೆಲ್ ಹಾಕಿಸುವುದಕ್ಕೆ ಸಾಧ್ಯ ಅಂತಹ ಕಡೆಗಳಲ್ಲಿ ಬೋರ್‌ವೆಲ್ ಹಾಕಬೇಕು, ಇಲ್ಲದೇ ಹೋದರೆ ಮಿನಿ ವಾಟರ್ ಸ್ಕೀಮ್‌ಮಾಡಿ ಟ್ಯಾಪ್ ಹಾಕಿ, ನೀರನ್ನು ಒದಗಿಸಬೇಕು, ಇದೂ ಸರಿಹೋಗದೇ ಇದ್ದರೆ, ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ತಯಾರು ಮಾಡಬೇಕು. ಇಪತ್ತು ನೀರು ಸಿಕ್ಕದೇ ಇರತಕ್ಕ ಜಾಗಗಳು ಕರ್ನಾಟಕದಲ್ಲಿ ಇರಬಹುದು. ನನ್ನ ಕ್ಷೇತ್ರದಲ್ಲಿ ಇಂತಹ ೨-೩ ಹಳ್ಳಿಗಳು ಇವೆ. ಈ ವಾದವನ್ನು ಒಪ್ಪಿಕೊಂಡು ಸರ್ಕಾರದ ವತಿಯಿಂದ ನಾನು ಹೇಳುತ್ತಿದ್ದೇನೆ, ಇದನ್ನು ರೀ ಸರ್ವೆ ಮಾಡಬೇಕು. ಜಿಲ್ಲಾಪರಿಷತ್ ಅಧ್ಯಕ್ಷರಿಗೆ, ಶಾಸಕರಿಗೆ, ತಾಲ್ಲೂಕು ಸಮಿತಿ ಅಧ್ಯಕ್ಷರಿಗೆ

ಹಾಗೂ ಮಂಡಲ್ ಪ್ರಧಾನರಿಗೆ ಪತ್ರಬರೆಯಂಬೇಕೆಂದು ನಾನು ಮನಸ್ಸು ಮಾಡುತ್ತಿದ್ದೇನೆ, ಅಂದರೆ, ಅವರವರ ಕ್ಷೇತ್ರದಲ್ಲಿ ಪ್ಯಾಬ್ಲಮ್ ವಿಲೇಜಸ್ ಯಾವುವು, ಇಷ್ಟೆಲ್ಲಾ ಮಾಡಿದರೂ ನೀರು ಸಿಕ್ಕುವುದಿಲ್ಲ, ಬೋರ್ ತೆಗೆದರೂ ನೀರು ಸಿಕ್ಕುವುದಿಲ್ಲ, ೨೦೦—೩೦೦ ಅಡಿ ಆಳ ತೋಡಿದರೂ ನೀರು ಸಿಕ್ಕುವುದಿಲ್ಲ ಇಂತಹ ಹಳ್ಳಿಗಳಿಗೆ ಮೊದಲ ಆದ್ಯತೆಯನ್ನು ಕೊಟ್ಟು, ಆದ್ಯತೆಯ ಮೇಲೆ ಈ ಸಮಸ್ಯೆಯನ್ನು ಬಗೆಹರಿಸಬೇಕು. ನಮ್ಮ ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಧೋರಣೆಯನ್ನು ತಾಳಿದೆ. ಇದಕ್ಕಾಗಿ ಜನರಿಂದ ನೇರವಾಗಿ, ಜಿಲ್ಲಾ ಮಟ್ಟದಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತ್ಯೇಕ ಸಭೆಯನ್ನು ಕರೆದು, ಪ್ರತಿನಿಧಿಗಳ ಸಭೆ ಕರೆದು, ಇದನ್ನು ನೇರವಾಗಿ ಅರ್ಥಮಾಡಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತೇವೆ. ಇದಕ್ಕೆ ಎಷ್ಟೇ ದುಡ್ಡು ಖರ್ಚಾಗಲೀ, ಈ ಸಮಸ್ಯೆಯನ್ನು ಬಹುಪಟ್ಟಿಗೆ ಇದೇ ವರ್ಷ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ತಪ್ಪಿದರೆ ಮುಂದಿನ ವರ್ಷದೊಳಗೆ ಬಗೆಹರಿಸುತ್ತೇವೆ. ಈ ವಿಚಾರಗಳಿಗೆ, ಹಣಕಾಸಿನ ಶಕ್ತಿಸಾಮರ್ಥ್ಯ ಕರ್ನಾಟಕಕ್ಕೆ ಇದೆಯೆಂದು ಧೈರ್ಯವಾಗಿ ಹೇಳಬಲ್ಲೆ. ಇದರ ಬಗ್ಗೆ ಎಷ್ಟು ಮಾಹಿತಿ ಇರಬೇಕೋ ಅಷ್ಟು ಮಾಹಿತಿ ಸರ್ಕಾರದ ಮಟ್ಟದಲ್ಲಿ ಇಲ್ಲದೇ ಇರುವುದರಿಂದ, ತಮ್ಮ ಪ್ರಶ್ನೆಗೆ ಇಷ್ಟು ವಿವರವಾದ ಉತ್ತರವನ್ನು ಹೇಳಬೇಕಾಯಿತು.

ಶ್ರೀ ಎಲ್.ಆರ್. ಶಿವರಾಮೇಗೌಡ —ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಈ ವಿಷಯದಲ್ಲಿ ಇರತಕ್ಕ ಕಾಳಜಿ ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಆದರೂ ಸಹಿತ ೬—೭ ತಿಂಗಳಿಂದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬರ ಜಾಸ್ತಿಯಾಗಿ, ಜಿಲ್ಲಾಪರಿಷತ್ ಮೂಲಕ ಟ್ಯಾಕ್ಟರಿನಲ್ಲಿ ನೀರನ್ನು ಹೊಡೆಸಿಕೊಟ್ಟಿದ್ದೇವೆ. ಪ್ರತಿದಿನ ಟ್ಯಾಕ್ಟರಿನಲ್ಲಿ ನೀರನ್ನು ಹೊಡೆಸಿಕೊಡುವುದಕ್ಕಾಗುತ್ತದೆಯೇ? ಆದ್ದರಿಂದ ನೀವು ಮಾಹಿತಿ ತರಿಸಿಕೊಂಡು, ಸರ್ಕಾರದಿಂದ ತೀರ್ಮಾನ ಕೈಗೊಳ್ಳಬೇಕು. ಆ ಹಳ್ಳಿಗಳ ಜನರಿಗೆ ನೀರು ಬೇಕೇ ಬೇಡವೇ. ಅವರು ಬದುಕುವುದಕ್ಕೆ ನೀರು ಬೇಡವೇ ಎಂಬ ಬಗ್ಗೆ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ.—ಬೋರ್‌ವೆಲ್ ಹಾಕಿದರೂ ಎಲ್ಲಿ ನೀರು ಸಿಗುವುದಿಲ್ಲ, ಅಂತಹ ಕಡೆಗಳಿಗೆ ಬೇರೆ ಕಡೆಯಿಂದ ನೀರು ತರಬೇಕಾಗುತ್ತದೆ. ಈ ವ್ಯವಸ್ಥೆಯನ್ನು ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಇಷ್ಟಾದರೂ ನಾವು ಇಂದು ೪೦ ಕೋಟಿ ಮೇಲೆ ಖರ್ಚುಮಾಡುತ್ತಿದ್ದೇವೆ, ಈ ಹಣವನ್ನು ಜಿಲ್ಲಾಪರಿಷತ್ತಿಗೆ ಕೊಡುತ್ತಿದ್ದೇವೆ. ನಮ್ಮದು ೨೦ ಕೋಟಿ, ಕೇಂದ್ರದಿಂದ ಬರುವಂಥಾದ್ದು ೨೦ ಕೋಟಿ, ಹೀಗೆ ಒಟ್ಟು ೪೦ ಕೋಟಿ ರೂಪಾಯಿಗಳು ಇಷ್ಟೆಲ್ಲಾ ಮಾಡಿದರೂ ಕೆಲವು ಹಳ್ಳಿಗಳಿಗೆ ಟ್ರಕ್ಕಿನಿಂದ ನೀರನ್ನು ತರಿಸುವಂಥ ಪರಿಸ್ಥಿತಿ ಬಂದರೆ, ಖಂಡಿತವಾಗಿಯೂ ಅದರ ಮೂಲಕ ಪೂರೈಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆಂದಲ್ಲ, ಯಶಸ್ವಿಯಾಗಿ ಮಾಡುತ್ತೇವೆ. ಅಂತಹ ಹಳ್ಳಿಗಳನ್ನು ನಮಗೆ ತಿಳಿಸಿದರೆ, ನಾವು ಚೀಫ್ ಸೆಕ್ರಟರಿಯವರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ತಿಳಿಸಿ, ಇಂತಹ ಹಳ್ಳಿಗಳಿಗೆ ನೇರವಾಗಿ ನೀರು ಒದಗಿಸುವ ಏರ್ಪಾಡು ಮಾಡಿ ಎಂದು ಹೇಳುತ್ತೇವೆ. ಇನ್ನು ೨—೩ ವಾರ ಈ ರೀತಿ ಮಾಡಬೇಕಾಗುತ್ತದೆ, ಮಳೆ ಬಂದರೆ ಬೇಕಾಗುವುದಿಲ್ಲ ಈಗಾಗಲೇ ಮೇ ತಿಂಗಳು ಮುಗಿದಿದೆ. ಇಂತಹ ಬಿಕ್ಕಟ್ಟು ಪರಿಸ್ಥಿತಿ ಬಹಳ ಕಡೆ ಇರುವುದಿಲ್ಲ. ಒಂದೆರಡು ಕಡೆ ಇದ್ದರೆ ಅವುಗಳನ್ನು ದಯವಮಾಡಿ ತಿಳಿಸಿದರೆ ನಾವು ನೇರವಾಗಿ ಫೋನ್ ಮಾಡಿ, ಟ್ರಕ್‌ನಿಂದ ನೀರು ತೆಗೆದು ಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಟ್ರಕ್‌ನಲ್ಲಿ ನೀರು ತೆಗೆದುಕೊಂಡು ಹೋಗುವುದಕ್ಕೆ ಜಿಲ್ಲಾ ಪರಿಷತ್ತಿನವರು ಅನುಮತಿ ಕೊಡುತ್ತಿಲ್ಲ. ನಾನು ಈ ವಿಚಾರದಲ್ಲಿ, ಕಂಪ್ಲೀಟ್ ಫೈಲು ತಯಾರು ಮಾಡಿ, ಸರ್ಕಾರಕ್ಕೆ ಒಪ್ಪಿಸಿ ೪—೫ ತಿಂಗಳಾಯಿತು. ಇನ್ನೂ ನನಗೆ ಉತ್ತರ ಸಿಕ್ಕಿಲ್ಲ. ನಾನು ಹೇಳಿದ ೬—೭ ಹಳ್ಳಿಗಳಿಗೆ ನೋಟ್ ಮಾಡಿಸಿ, ಆ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಉಪ ಸಭಾಧ್ಯಕ್ಷೆಣಿಯವರು.—ಇದಕ್ಕೆ ಈಗಾಗಲೇ ಮಂತ್ರಿಗಳು ಉತ್ತರ ಹೇಳಿದ್ದಾರೆ. ಅಂತಹ ನಾಲ್ಕೈದು ಹಳ್ಳಿಗಳು ಏನಾದರೂ ಇದ್ದರೆ ಹೇಳಿ, ಏನಾದರೂ ವ್ಯವಸ್ಥೆ ಮಾಡೋಣ ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಆದೇಶ ಕೊಡಬೇಕು. ಈ ಹಳ್ಳಿಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆಗೆ ನಾಳೆಯಿಂದಲೇ ಕ್ರಮ ತೆಗೆದುಕೊಳ್ಳಬೇಕು. ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಹಳ್ಳಿಗಳಿಗೆ ನಾಳೆಯಿಂದ ನೀರು ಒದಗಿಸುವ ವ್ಯವಸ್ಥೆ ಮಾಡಬೇಕು.

ಉಪಾಧ್ಯಕ್ಷಿಣಿಯವರು.— ಈಗ (ಉತ್ತರವಿಲ್ಲ) ವಿಜಯಕುಮಾರ್ ಶೆಟ್ಟಿಯವರು ಪ್ರಶ್ನೆ ಕೇಳಬಹುದು.

ಶ್ರೀಮತಿ ಚಂದ್ರಪ್ರಭಾ ಅರಸು.— ಮಾನ್ಯ ಉಪಸಭಾಧ್ಯಕ್ಷಿಣಿಯವರೇ, ಪ್ರಾಬ್ಲಮ್ಯಾಟಿಕ್ ವಿಲೇಜಸ್ ಇವೆ ಎಂದು ಮಾನ್ಯ ಮಂತ್ರಿಗಳೂ ಹೇಳಿದರು. ಎಲ್ಲಾದರೂ ಬೋರ್‌ವೆಲ್‌ಗಳು ಅಂದರೆ ಕೊಳವೆ ಬಾವಿಗಳು ವಿಫಲ ಆಗಿದೆ ಎಂದು ಕಂಡು ಬಂದರೆ ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಾವೂ ಕೂಡಾ ಹಳ್ಳಿಗಳಲ್ಲಿ ಇದರ ಬಗ್ಗೆ ನೋಡಿದಾಗ ಅಲ್ಲಿ ಕೆಲವು ಕಟ್ಟುಪಾಡುಗಳು ಇವೆ. ಪಂಚಾಯತಿಯವರು ಇದಕ್ಕೆ ಶೇಕಡಾ ೨೫ ಭಾಗ ಮತ್ತು ಜಿಲ್ಲಾ ಪರಿಷತ್‌ನವರು ಶೇಕಡಾ ೫೦ ಭಾಗ ಕೊಡಬೇಕೆಂದು ನಿಬಂಧನೆ ಇದೆ. ಕೆಲವು ಪಂಚಾಯತಿಗಳಿಗೆ ಇದನ್ನು ಕೊಡುವುದಕ್ಕೆ ಸಾಮರ್ಥ್ಯ ಇಲ್ಲದೆ, ಹಣ ಸಾಲದೆ ತೊಂದರೆಯಾಗಿದೆ. ಇದಕ್ಕಾಗಿ ಸರಕಾರದಿಂದ ಹೆಚ್ಚಿನ ಹಣಕಾಸಿನ ಸಾಲಭ್ಯ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು.—ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ.—ರೂಲ್ಸ್ ಏನಾದರೂ ಇದಕ್ಕೆ ಅಡ್ಡಿ ಬರುತ್ತಿದ್ದರೆ, ರೂಲ್ಸ್ ಬದಲಾಯಿಸುವುದೇನೂ ಕಷ್ಟ ಆಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಇದಕ್ಕಾಗಿ ಹಣ ಕಟ್ಟುವ ವ್ಯವಸ್ಥೆ ಇಲ್ಲ. ಸರಕಾರದ ನೀತಿ ಬದಲಾಗಿದೆ.

ಶ್ರೀ ಎಂ.ವೈ. ಘೋರ್ಪಡೆ.—ನೀರು ಇಲ್ಲದ ಕಡೆ ನೀರು ಕೊಡಬೇಕು. ಇದಕ್ಕೆ ರೂಲ್ಸ್ ಏನಾದರೂ ಅಡ್ಡ ಬಂದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ರೂಲ್ಸ್ ಇಲ್ಲ.

ಸೂರತ್ಕಲ್ ಸರ್ಕಾರಿ ಆಸ್ಪತ್ರೆ

೧೪೩. ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್) —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೂರತ್ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಪೀಠೋಪಕರಣಗಳು ಇಲ್ಲದಿರುವುದು ಹಾಗೂ ಕಟ್ಟಡವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಆಸ್ಪತ್ರೆಯಲ್ಲಿ ವೈದ್ಯರುಗಳಿದ್ದರೂ ಸರಿಯಾದ ಮೇಲುಸ್ತುವಾರಿ ವ್ಯವಸ್ಥೆ ಇಲ್ಲದೆ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳು).—

ಅ) ಪೀಠೋಪಕರಣಗಳು ಸಾಕಷ್ಟಿವೆ. ಕಟ್ಟಡ ದುಸ್ಥಿತಿಯಲ್ಲಿರುವುದು ನಿಜ. ರೂ. ೬೯ ಸಾವಿರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ದುರಸ್ತಿಯನ್ನು ಕೈಗೊಳ್ಳಲಾಗುವುದು.

ಆ) ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ ಯಾವ ದೂರು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಕಟ್ಟಡದ ದುರಸ್ತಿಯನ್ನು ಜಿಲ್ಲಾ ಪರಿಷತ್ ಮುಖ್ಯಾಂತರ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಿಜಯಕುಮಾರ್ ಶೆಟ್ಟಿ.—ಸೂರತ್ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಥಿಯೇಟರ್ ಸರಿಯಾಗಿಲ್ಲ. ಲೇಬರ್ ವಾರ್ಡ್ ಥಿಯೇಟರ್ ಸಮೇತ ಸರಿಯಿಲ್ಲ. ಮೊನ್ನೆ ಲೆಪ್ರೋಸ್ಕೊಪಿಕ್ ಆಪರೇಷನ್‌ಗೆ ಬಂದಂಥ ರೋಗಿಗಳನ್ನು ಅಲ್ಲಿನ ಡಾಕ್ಟರ್‌ರವರು ಆಪರೇಷನ್ ಥಿಯೇಟರ್ ಸರಿಯಾಗಿಲ್ಲ ಎಂದು ಆಪರೇಷನ್ ಮಾಡುವುದಕ್ಕೆ ಒಪ್ಪದೆ ವಾಪಸ್ ಕಳುಹಿಸಿದ್ದಾರೆ. ಲೇಬರ್ ವಾರ್ಡ್ ಥಿಯೇಟರ್‌ನ ಆಪರೇಷನ್ ಟೇಬಲ್ ಮಣ್ಣು ಹಿಡಿದಿದೆ. ದಯವಿಟ್ಟು ಆದಷ್ಟು ಶೀಘ್ರದಲ್ಲಿ ಇದಕ್ಕೆ ದುರಸ್ತಿಗಾಗಿ ಹಣವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಆಸ್ಪತ್ರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಅವರೇ ಕಟ್ಟಡ ದುರಸ್ತಿಗಾಗಿ ಹಣವನ್ನು ಖರ್ಚು ಮಾಡ